ಆ) ಹಾಗಿದ್ದಲ್ಲಿ ಅದರ ಮೊತ್ತ ಎಷ್ಟು?

ಇ) ಏಳನೇ ಯೋಜನೆಯಲ್ಲಿ ಇದಕ್ಕಾಗಿ ವಿನಿಯೋಗಿಸಲಿಟ್ಟ ಹಣವೆಷ್ಟು?

ಈ) ಉಗ್ರಾಣ ಮಳಿಗೆಯಂ ಹೆಚ್ಚುದರವನ್ನು ನಿಗದಿಪಡಿಸಿದ್ದರಿಂದ ತುಂತುರು ನೀರಾವರಿ ಯೋಜನೆಗೆ ಕೇಂದ್ರ ಸರಕಾರದಿಂದ ಕೊಡುವ ಸಹಾಯ ಧನವನ್ನೂ ನಿಲ್ಲಿಸಿರುವುದಂ ನಿಜವೆ?

ಉ) ಹಾಗಿದ್ದಲ್ಲಿ, ಸರಕಾರದವರು ಈ ಬಗ್ಗೆ ಕೈ ಗೊಳ್ಳುವ ಕ್ರಮ ಏನು?

ಶ್ರೀ ಆಬ್ದುಲ್ ನಜೀರ್‌ಸಾಬ್ (ಗ್ರಾಮೀಣ ಅಭಿವೃದ್ಧಿ ಮತ್ತು ಪಂಚಾಯತ್ ರಾಜ್ ಮತ್ತು ವಕ್ಫ್ ಮಂತ್ರಿಗಳು).—

ಅ) ಹೌದಂ. ನೀಡಲಾಗುತ್ತಿದೆ.

ಸಹಾಯ ಧನ ಈ ಕೆಳಕಂಡಂತೆ ಇದೆ.

ಸಣ್ಣ ರೈತರಿಗೆ	ಶೇಕಡಾ ೨೫ರಂತೆ
ಅತಿ ಸಣ್ಣ ರೈತರಿಗೆ	ಶೇಕಡಾ ೩೩ ೩/೧ ರಂತೆ
ಪರಿಶಿಷ್ಟ ಜಾತಿ ಮತ್ತು ವರ್ಗದ ಸಣ್ಣ ಮತ್ತು ಅತೀಸಣ್ಣ ರೈತರು	ಶೇಕಡಾ ೫೦ ರಂತೆ
ಸಹಕಾರಿ ಸಮುದಾಯ ತಂತುರು ನೀರಾವರಿ	ಶೇಕಡಾ ೫೦ (ಪ್ರತಿ ವೈಯಂಕ್ತಿಕ ಉಪಕರಣದ ಮೊತ್ತಕ್ಕೆ ಮಿತಿಯಂತೆ)

ಇ) ಸನ್ ೧೯೮೬–೮೭ನೇ ವರ್ಷಕ್ಕೆ ೩೮.೯೦ ಲಕ್ಷ ರೂಗಳು ಮಂಜೂರಾತಿ ಬಂದಿದೆ. ಇನ್ನೂ ೮೦–೦೦ಲಕ್ಷ ರೂ. ಗಳ ಮಂಜೂರಾತಿ ಬರುವ ನಿರೀಕ್ಷೆ ಇದೆ. ಮುಂದಿನ ವರ್ಷಗಳ ಮೊತ್ತ ಗೊತ್ತಾಗಿಲ್ಲ.

ಈ) ಸರಕು ಖರೀದಿ ಇಲಾಖೆ ಕಡಿಮೆ ದರದಲ್ಲಿ ದರ ಕರಾರನ್ನು ಕೊಟ್ಟಿತ್ತು. ಮತ್ತು ಭಾರತ ಸರಕಾರ ಸಹಾಯ ಧನವನ್ನು ನಿಲ್ಲಿಸಿರುವುದಿಲ್ಲ.

ಉ) ಉದ್ಭವಿಸುವುದಿಲ್ಲ.

ಸುಳ್ಯ ತಾಲ್ಲೂಕಿನಲ್ಲಿ ಎನ್ ಆರ್ ಇ ಪಿ ಯೋಜನೆ ಬಗ್ಗೆ

ಶ್ರೀ ಕೆ ಕುಶಾಲ (ಸುಳ್ಯ).—ಮಾನ್ಯ ಗ್ರಾಮೀಣಾಭಿವೃದ್ಧಿ ವಸತಿ ಮತ್ತು ವಕ್ಫ್ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ೧೯೮೫–೮೬ನೇ ಸಾಲಿನಲ್ಲಿ ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ತಾಲ್ಲೂಕಿನ ಅಮರ ಮಡ್ನೂರು ಗ್ರಾಮದಲ್ಲಿ ಗ್ರಾಮೀಣ ಅಭಿವೃದ್ಧಿ ಯೋಜನೆಯಂತೆ ಎನ್ ಆರ್ ಇ ಪಿ ಯೋಜನೆಯಲ್ಲಿ ಹುಲ್ಲುಗಾವಲು ನಂತೆ ಹುಲ್ಲು ಬೆಳೆಸುವ ಯೋಜನೆಯಂನ್ನು ಮಾಡಲಾಗಿತ್ತೇ?

ಆ) ಹಾಗಿದ್ದಲ್ಲಿ, ಈ ಯೋಜನೆಯಂತೆ ಮಂಜೂರಾದ ಹುಲ್ಲುಗಾವಲಿಗೆ ೧೯೮೫ನ್ನು ಇಸವಿಯವರೆಗೆ ಎಷ್ಟು ಹಣ ಖರ್ಚು ಮಾಡಲಾಗಿದೆ.

ಇ) ಈ ಹುಲ್ಲುಗಾವಲನ್ನು (೨) ಎರಡು ವರ್ಷಗಳಿಂದ ಕೈ ಬಿಡಲಾಗಿತ್ತೆ? ಹಾಗಿದ್ದಲ್ಲಿ ಈಗ ಅದನ್ನು ಪುನಃ ಪ್ರಾರಂಭಿಸಲಾಗಿದೆಯೇ?

ಈ) ಸುಳ್ಯ ತಾಲ್ಲೂಕಿನ ಕನಕಮಂಜಲು ಗ್ರಾಮದಲ್ಲಿ ಕೇಂದ್ರ ಸರ್ಕಾರದ ಯೋಜನೆಯಲ್ಲಿ ಹುಲ್ಲುಗಾವಲು ಪ್ರಸ್ತಾವನೆ ಇತ್ತೆ. ಹಾಗಿದ್ದಲ್ಲಿ ಆ ಬಗ್ಗೆ ಏನು ಕ್ರಮ ಕೈಗೊಳ್ಳಲಾಗಿದೆ. ಹಾಗೂ ಇದರ ಬದಲು ಈ ಹಿಂದೆ ಮಂಜೂರಾಗಿ ಕೈ ಬಿಟ್ಟ ಅಮರ ಮಡ್ನೂರು ಗ್ರಾಮದ ಹುಲ್ಲುಗಾವಲನ್ನು ಕೈಗೆತ್ತಿಕೊಳ್ಳಲಾಗಿದೆಯೇ?

ಶ್ರೀ ಅಬ್ದುಲ್ ನಜೀರ್‌ಸಾಬ್ (ಗ್ರಾಮೀಣಾಭಿವೃದ್ಧಿ, ವಸತಿ ಮತ್ತು ವಕ್ಫ್ ಮಂತ್ರಿಗಳು) — ಅ) ೧೯೮೫-೮೬ರಲ್ಲಿ ಈ ಕಾಮಗಾರಿಯನ್ನು ಕೈಗೊಂಡಿರುವುದಿಲ್ಲ ಆದರೆ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಯೋಜನೆಯಲ್ಲಿ (ಅರಣ್ಯ) ಸಾಮಾಜಿಕ ಅಮರ ಮಡ್ಡೂರು ಗ್ರಾಮ, ಸಾಳ್ಯ ತಾ. ನಲ್ಲಿ ಕೈಗೊಳ್ಳಲಾಗಿತ್ತು.

ಆ) ೯೮೨೧ ರೂ. ಗಳು

ಇ) ಹೌದು ನೀರಿನ ಸಮಸ್ಯೆ ಬಗೆಹರಿದ ಮೇಲೆ ಪ್ರಾರಂಭಿಸಲಾಗುವುದು.

ಈ) ಇಲ್ಲಾ ಕೊನಡಕಾ ಜಲಸೂರು ಗ್ರಾಮದಲ್ಲಿ ನೀರಿನ ಸೌಲಭ್ಯ ಇಲ್ಲದೇ ಇರುವುದರಿಂದ ಇದನ್ನು ಅಮರ ಮಡ್ಡೂರು ಗ್ರಾಮಕ್ಕೆ ಬದಲಾಯಿಸಿರುತ್ತದೆ.

ಶಿರಾ ಪಟ್ಟಣದಲ್ಲಿ ನೀರು ಸರಬರಾಜಿಗಾಗಿ ಓವರ್ ಹೆಡ್ ಟ್ಯಾಂಕ್‌ಗಳನ್ನು ನಿರ್ಮಿಸುವ ಬಗ್ಗೆ

೮೨೬. ಶ್ರೀ ಬಿ ಗಂಗಣ್ಣ. (ಕಳ್ಳಂಬೆಳ್ಳ).—ಮಾನ್ಯ ಕಾನೂನು ಸಂಸದೀಯ ವ್ಯವಹಾರಗಳು ಆಹಾರ ಮತ್ತು ನಾಗರೀಕ ಸರಬರಾಜು ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

೧) ಶಿರಾ ಪಟ್ಟಣಕ್ಕೆ ನೀರು ಸರಬರಾಜಿಗಾಗಿ ಮಂಜೂರಾಗಿರುವ ಮೊತ್ತವೆಷ್ಟು?

೨) ಈ ಬಗ್ಗೆ ಕೈಗೊಂಡಿರುವ ಕಾಮಗಾರಿಗಳೇನು?

೩) ಶಿರಾ ಪಟ್ಟಣದಲ್ಲಿ ಮಲ್ಲಿಕ್‌ರಾಯನದರ್ಗದ ಭಾಗದಲ್ಲಿರುವ ನೀರಿನ ಟ್ಯಾಂಕು ಶಿಥಿಲವಾಗಿರುವ ಸ್ಥಿತಿಯಲ್ಲಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೆ?

೪) ನೀರು ಸರಬರಾಜು ಯೋಜನೆಯಲ್ಲಿ ಒಳಗೊಂಡಿರುವ ಮೂರು ನೀರಿನ ಟ್ಯಾಂಕುಗಳು ಸೇರಿದಂತೆ ಎಲ್ಲಾ ಕಾಮಗಾರಿಗಳನ್ನು ಪೂರೈಸಿ ಇನ್ನೆಷ್ಟು ಅವಧಿಯಲ್ಲಿ ಕುಡಿಯುವ ನೀರನ್ನು ಸರಬರಾಜು ಮಾಡಲಾಗುವುದು?

ಶ್ರೀ ಎ ಲಕ್ಷ್ಮೀಸಾಗರ್ (ಕಾನೂನು ಸಂಸದೀಯ ವ್ಯವಹಾರಗಳು ಆಹಾರ ಮತ್ತು ನಾಗರೀಕ ಸರಬರಾಜು ಮಂತ್ರಿಗಳು).—

೧) ೬೨.೦೦ ಲಕ್ಷ ರೂ.ಗಳು

೨) ಈ ಕೆಳಕಂಡ ಕಾಮಗಾರಿಗಳನ್ನು ಕೈಗೊಳ್ಳಲಾಗಿದೆ.

ಅ) ಶಿರಸ್ತೆದಾರಕಟ್ಟೆ ಪ್ರದೇಶದಲ್ಲಿ ೧೭ ಕೊಳವೆ ಬಾವಿಗಳು, ಶಿರಾ ಮಧುಗಿರಿ ರಸ್ತೆ ಬಳಿ ಎರಡು ಕೊಳವೆ ಬಾವಿಗಳು ಹಾಗೂ ಹರಿಜನ ಕಾಲೋನಿಯಲ್ಲಿ ೧ ಕೊಳವೆ ಬಾವಿಯನ್ನು ಕೊರೆಯಲಾಗಿದೆ.

ಆ) ಕೋಟೆ ಪ್ರದೇಶದಲ್ಲಿ ಕೊರೆದಿರುವ ೪ ಕೊಳವೆ ಬಾವಿಗಳಿಗೆ ಜಲಾಂತರ್ಗಾಮಿ ಪಂಪು ಸೆಟ್ಟುಗಳನ್ನೂ ಅಗತ್ಯವಾಗಿ ಬೇಕಾದ ಇತರೆ ಉಪಕರಣಗಳನ್ನೂ ಸರಬರಾಜು ಮಾಡಿ ಸಂಪರ್ಕ ಕೊಳವೆಗಳನ್ನು ಅಳವಡಿಸಿ ಉಪಯೋಗಿಸಲಾಗುತ್ತಿದೆ.

ಇ) ಎರಡು ೨೦ ಹೆಚ್ ಪಿ ಸಾಮರ್ಥ್ಯದ ಗಂರುತ್ವಾಕರ್ಷಕ ಪಂಪು ಸೆಟ್‌ಗಳನ್ನು ಕೋಟೆಯ ನೀರಿನ ತೊಟ್ಟಿಯ ಹತ್ತಿರದ ಪಂಪು ಮನೆಯಲ್ಲಿ ಅಳವಡಿಸಿ ಉಪಯೋಗಿಸಲಾಗುತ್ತಿದೆ.

ಈ) ತುಮಕೂರಿನ ಗೇಟ್ ಬಳಿ ೧೦.೦೦ ಲಕ್ಷ ಲೀಟರ್ ಸಾಮರ್ಥ್ಯದ ಪೇಲ್ಲಟ್ಟಿದ ಜಲಸಂಗ್ರಹಾಗಾರಕ್ಕೆ ಟೆಂಡರ್ ಕರೆದು ಗುತ್ತಿಗೆದಾರರನ್ನು ನೇಮಿಸಲು ಕ್ರಮ ಕೈಗೊಂಡಿದೆ.

೩) ಬಂದಿದೆ